ಫ್ಯಾಷನ್

# ಮದುಮಗಳಿಗೆ ಸೌಂದರ್ಯ ಚಿಕಿತ್ಸೆ



**ಸೌಂದರ್ಯ ಚಿಕಿತ್ಸೆಗಳಾದ ಡರ್ಮರೋಲರ್ ಥೆರಪಿ, ಹೈಡ್ರಾಫೇಷಿಯಲ್, ಪಂಪ್‌ಕಿನ್ ಪೀಲ್ ಥೆರಪಿ, ಲೇಸರ್ ಹೇರ್ ರಿಮೂವಲ್, ಸ್ಕಿನ್ ಬ್ರೈಟೆನಿಂಗ್, ಬೊಟೆಕ್ಸ್, ಡರ್ಮಲ್ ಫಿಲ್ಲರ್ಸ್ ಮುಂತಾದವುಗಳನ್ನು ಮದುವೆಗೆ ಸಾಕಷ್ಟು ಮುಂಚೆಯೇ ಮಾಡಿಸಿಕೊಂಡಿದ್ದರೆ ಮದುವೆ ದಿನ ಮದುಮಗಳು ಇನ್ನಷ್ಟು ಮಿಂಚಲು ಸಾಧ್ಯ.**

★ ಸುಮಾ

ಮದುವೆ ನಿಶ್ಚಯವಾದ ಹೆಣ್ಣು ನಿಶ್ಚಿತಾರ್ಥವಾದ ಬಳಿಕ ಮದುವೆಯ ದಿನದವರೆಗೆ ಸೌಂದರ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾಗುತ್ತದೆ. ಮದುವಣಗಿತ್ತಿ ಅಂದಿನ ದಿನದ ಕೇಂದ್ರ ಬಿಂದು.

ಬೆಂಗಳೂರಿನಲ್ಲಿರುವ ಕೆಲವು ಬ್ಯೂಟಿ ಪಾರ್ಲರ್‌ಗಳು ಮದುವೆ ಹೆಣ್ಣಿನ ಅಲಂಕಾರಕ್ಕಾಗಿಯೇ ವಿಶಿಷ್ಟ ವಿನ್ಯಾಸಗಳ ಸೆಟ್‌ಗಳನ್ನು, ಸೌಂದರ್ಯ ಸಾಧನಗಳನ್ನು ಇಟ್ಟುಕೊಂಡು ಮದುವೆಗಿಂತ ಸಾಕಷ್ಟು ಮೊದಲೇ ಮದುಮಗಳ ಸೌಂದರ್ಯವರ್ಧನೆಯ ಜವಾಬ್ದಾರಿ ವಹಿಸುತ್ತಿವೆ.



'ಸೌಂದರ್ಯ ರಕ್ಷಣೆಗೆ ಅದರಲ್ಲೂ ತ್ವಚೆಯ ಪೋಷಣೆಗೆ ಕೆಲವೊಂದು ಮಾರ್ಗೋಪಾಯಗಳನ್ನು ಪಾಲಿಸಬೇಕು. ತ್ವಚೆಯ ಆರೋಗ್ಯ ಕಾಪಾಡಿ, ಅದನ್ನು ಹೊಳಪಿನಿಂದ ನಯವಾಗಿರುವಂತೆ ಮಾಡಲು ಡರ್ಮರೋಲರ್ ಥೆರಪಿ, ಹೈಡ್ರಾಫೇಷಿಯಲ್, ಪಂಪ್‌ಕಿನ್ ಪೀಲ್ ಥೆರಪಿ, ಲೇಸರ್ ಹೇರ್ ರಿಮೂವಲ್, ಸ್ಕಿನ್ ಬ್ರೈಟೆನಿಂಗ್, ಬೊಟೆಕ್ಸ್, ಡರ್ಮಲ್ ಫಿಲ್ಲರ್ಸ್..' ಹೀಗೆ ಅನೇಕ ಸೌಂದರ್ಯ ಚಿಕಿತ್ಸೆಗಳಿವೆ. ಇವುಗಳನ್ನು ಮಾಡಿಸಿಕೊಂಡರೆ ಮದುಮಗಳು ಬಹಳ ಆಕರ್ಷಕವಾಗಿ ಕಾಣಲು ಸಾಧ್ಯ' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಕಾಸ್ಮೆಟಿಕ್ ಡರ್ಮಟಾಲಸ್ಟ್ ಡಾ. ಶುಭಾ ಧರ್ಮಣ್ಣ.

ತ್ವಚೆಯಲ್ಲಿನ ನಿರ್ಜೀವ ಕಣಗಳನ್ನು ಹೋಗಲಾಡಿಸಿ, ಒರಟಾಗಿರುವ ಚರ್ಮವನ್ನು ನಯಗೊಳಿಸಲು ಡರ್ಮರೋಲರ್ ಥೆರಪಿ ಬಹಳ ಸಹಕಾರಿ. ಈ ಚಿಕಿತ್ಸೆಯನ್ನು ಮುಖದ ಮೇಲೆ ಮಾಡಿಸಿಕೊಳ್ಳಬೇಕು. ಮುಖದ ಚರ್ಮವನ್ನು ನಯಗೊಳಿಸುವ ಸಲುವಾಗಿ ತಯಾರಿಸಿದ ಕ್ರೀಮ್ ಅನ್ನು ತ್ವಚೆಯ ಮೇಲೆ ಹಚ್ಚಿದ ಬಳಿಕ ಅತ್ಯಂತ ತೆಳ್ಳಗಿನ ಸೂಜಿಯ ಮೂಲಕ ತ್ವಚೆಯ ಮೇಲೆ ರೋಲ್ ಮಾಡಿ ಚಿಕಿತ್ಸೆ ನೀಡಲಾಗುವುದು. ಇದರಿಂದ ತ್ವಚೆಗೆ ಹೊಳಪು ಬರುವುದಲ್ಲದೆ ದೀರ್ಘ ಕಾಲ ತ್ವಚೆ ಮೃದುವಾಗಿಯೇ ಉಳಿಯುತ್ತದೆ.

ಮದುವೆ ಹೆಣ್ಣಿನ ತ್ವಚೆಯ ಹೊಳೆಯುವಂತೆ ಮಾಡುವ ಇನ್ನೊಂದು ಸಾಧನ ಹೈಡ್ರಾ ಫೇಷಿಯಲ್. ಸೀರಮ್ ಬಳಸಿ ತ್ವಚೆಯನ್ನು ಪಾಲಿಶ್ ಮಾಡುವ ಈ ಫೇಷಿಯಲ್ ಅನ್ನು ಎಣ್ಣೆಯುಕ್ತ ಪ್ರಕೃತಿಯ ತ್ವಚೆಯುಳ್ಳವರೂ ಮಾಡಿಸಿಕೊಳ್ಳಬಹುದು. ಈ ಫೇಷಿಯಲ್ ಚರ್ಮದ ಮೇಲಿರುವ ಕಪ್ಪು ಕಲೆ, ಮೊಡವೆ ಕಲೆ, ಬಿಳಿ ಪ್ಯಾಚ್‌ಗಳು, ನೆರಿಗೆ ಗಟ್ಟಿದ ಚರ್ಮ, ಚರ್ಮ ಒಣಗುವಿಕೆ ಮುಂತಾದ ಸಮಸ್ಯೆಗಳನ್ನು ಹೋಗಲಾಡಿಸಿ ತ್ವಚೆಯನ್ನು ಮೃದುಗೊಳಿಸುತ್ತದೆ.

ಇದನ್ನು ಕ್ಲೆನ್ಸಿಂಗ್, ಎಕ್ಸ್ ಫಾಲಿಯೇಷನ್, ಎಕ್ಸ್ ಟ್ರಾಕ್ಷನ್ ಮತ್ತು ಹೈಡ್ರೇಷನ್ ಈ ಹಂತಗಳಲ್ಲಿ ಮಾಡಲಾಗುತ್ತದೆ. ಮದುವೆ ದಿನ ಮದುಮಗಳು ಕಂಗೊಳಿಸಲು ಈ ಫೇಷಿಯಲ್ ಸಹಕಾರಿ.

ಪಂಪ್‌ಕಿನ್ ಪೀಲ್ ಫೇಷಿಯಲ್ ಕೂಡ ಅತ್ಯಾಧುನಿಕವಾಗಿದ್ದು, ಸುಮಾರು 45 ನಿಮಿಷಗಳ ಕಾಲ ತೆಗೆದುಕೊಳ್ಳುವ ಹರ್ಬಲ್ ಫೇಷಿಯಲ್ ಇದಾಗಿದೆ. ಹೈಡ್ರೇಟಿಂಗ್ ಮಾಸ್ಕ್, ಕೊಲಾಜೆನ್ ಮಾಸ್ಕ್ ಮತ್ತು ಒಮೇಗಾ 3 ಫ್ಯಾಟಿ ಮಾಸ್ಕ್ ಬಳಸಿ ಮಾಡುವ ಫೇಷಿಯಲ್ ಇದು. ಇದರಿಂದ ಕಣ್ಣಿನ ಸುತ್ತ ಕಪ್ಪು ವರ್ತುಲ ಹೋಗಲಾಡಿಸಬಹುದು, ಆ್ಯಂಟಿ ಏಜಿಂಗ್ ಆಗಿಯೂ ಇದು ಕೆಲಸ ಮಾಡುತ್ತದೆ.

ಲೇಸರ್ ಹೇರ್ ರಿಮೂವಲ್ ಕೂಡ ಮದುಮಗಳಿಗೆ ಅಗತ್ಯವಾಗಿ ಮಾಡಬೇಕಾದ್ದು. ದೇಹದ ಮೇಲಿರುವ ಬೇಡದ ಕೂದಲನ್ನು ಲೇಸರ್ ಹೇರ್ ರಿಮೂವಲ್ ಮೂಲಕ ತೆಗೆಯಲಾಗುತ್ತದೆ. ಇದೊಂದು ನೋವು ರಹಿತ ಚಿಕಿತ್ಸೆ. ಇದರ ಜತೆಗೆ ಸ್ಕಿನ್ ಬ್ರೈಟೆನಿಂಗ್, ಬೊಟೆಕ್ಸ್ ಚಿಕಿತ್ಸೆಗಳೂ ಸೌಂದರ್ಯ ಇಮ್ಮಡಿಸಲು ಸಹಕಾರಿ.

## ಮದುವೆ ಹೆಣ್ಣಿಗೆ ಸೌಂದರ್ಯ ಟಿಪ್ಸ್

ಮನೆಯಲ್ಲಿ ಮದುವೆ ತಯಾರಿ ಹೇಗೆ ನಡೆಸುವಂತೆ ಮದುವೆ ಹೆಣ್ಣು ಸೌಂದರ್ಯ ವೃದ್ಧಿಗೆ ಮತ್ತು ಮದುವೆ ದಿನ ಚೆನ್ನಾಗಿ ಕಾಣಲು ಕೆಲವೊಂದು ಸೌಂದರ್ಯ ಟಿಪ್ಸ್ ಪಾಲಿಸಬೇಕಾಗುತ್ತದೆ. ಬೆಂಗಳೂರಿನ ನ್ಯೂ ಬ್ಲಾಸಮ್ ಬ್ಯೂಟಿ ಪಾರ್ಲರ್ ಒಡತಿ ಸ್ನೇಹಾ ಶೆಟ್ಟಿ ಅವರು ಕೊಡುವ ಸಲಹೆ ಇಲ್ಲಿದೆ..

* ಮದುವೆ ದಿನ ಹೇರ್ ಕಲರ್ ಬಳಸಿ ಹೇರ್ ಸ್ಟೈಲ್ ಮಾಡಿಸುವುದಾದರೆ ಆ ದಿನಕ್ಕಿಂತ ಸಾಕಷ್ಟು ದಿನ ಮೊದಲೇ ಒಮ್ಮೆ ಟ್ರಯಲ್ ಹೇರ್ ಕಲರ್ ಮತ್ತು ಸ್ಟೈಲ್ ಅನ್ನು ಪಾರ್ಲರ್‌ಗಳಲ್ಲಿ ಅಥವಾ ಕೇಶ ತಜ್ಞರಿಂದ ಮನೆಯಲ್ಲಿಯೇ ಮಾಡಿಸಿಕೊಳ್ಳಬೇಕು.

* ಹಲ್ಲುಗಳ ಸೌಂದರ್ಯ ಕಾಪಾಡಿಕೊಳ್ಳಿ. ಹಲ್ಲುಗಳು ಉಬ್ಬಾಗಿದ್ದರೆ, ಹಳದಿ ಬಣ್ಣಕ್ಕೆ ತಿರುಗಿದ್ದರೆ, ಬಾಯಿಯಿಂದ ದುರ್ವಾಸನೆ ಬರುತ್ತಿದ್ದರೆ ಮೊದಲು ತಜ್ಞ ದಂತ ವೈದ್ಯರನ್ನು ಕಂಡು ಸೂಕ್ತ ಪರಿಹಾರ ಕಂಡುಕೊಳ್ಳಬೇಕು.

* ಉಗುರನ್ನು ನೀಟಾಗಿ ಕತ್ತರಿಸಿಕೊಳ್ಳಿ. ಪೆಡಿಕ್ಯೂರ್, ಮೆನಿಕ್ಯೂರ್ ಕಡೆಗೂ ಗಮನಹರಿಸಿ. ಇವುಗಳನ್ನು ಸುಲಭವಾಗಿ ಮನೆಯಲ್ಲೇ ಮಾಡಿಕೊಳ್ಳಬಹುದು.

* ದಿನನಿತ್ಯ ವ್ಯಾಯಾಮ, ನಡಿಗೆ, ಯೋಗ ಮಾಡಿ ದೈಹಿಕವಾಗಿ ಸದೃಢವಾಗುವಂತೆ ನೋಡಿಕೊಳ್ಳಬೇಕು. ಜತೆಗೆ ಆಹಾರ ಕ್ರಮವೂ ನಿಯಮಿತವಾಗಿರಲಿ. ಕರಿದ ತಿಂಡಿ, ಸಿಹಿತಿಂಡಿ, ಮಸಾಲೆಯುಕ್ತ ಆಹಾರಗಳನ್ನು ಕಡಿಮೆ ಮಾಡಿ ಸಾತ್ವಿಕ ಆಹಾರದತ್ತ ಗಮನಹರಿಸಿ. ಇದರಿಂದ ಮದುವೆ ದಿನ ಆರೋಗ್ಯದಲ್ಲಿ, ಸೌಂದರ್ಯದಲ್ಲಿ ಏರುಪೇರು ಆಗುವುದಿಲ್ಲ.